# ಸರ್ವೋಚ್ಚ ನ್ಯಾಯಾಲಯ

**ಸನ್ಮಾನ್ಯ ನ್ಯಾಯಮೂರ್ತಿ ಅಭಯ್ ಮನೋಹರ್ ಸಪ್ರೆ**
**ಹಾಗೂ**
**ಸನ್ಮಾನ್ಯ ನ್ಯಾಯಮೂರ್ತಿ ದಿನೇಶ್ ಮಹೇಶ್ವರಿ**

ಕಮೀಷನರ್, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ – ವಿರುದ್ಧ – ಎಸ್.ಎನ್. ಸರ್ವೇಶ್

**ಸಿವಿಲ್ ಅಪೀಲು ಸಂಖ್ಯೆ:1463/2019, ದಿನಾಂಕ: 5ನೇ ಫೆಬ್ರವರಿ, 2019.**

**ತೀರ್ಪು**

**ನ್ಯಾಯಮೂರ್ತಿ ಅಭಯ್ ಮನೋಹರ್ ಸಪ್ರೆ :**

1. ಅನುಮತಿ ನೀಡಲಾಗಿದೆ.

2. ರಿಟ್ ಅರ್ಜಿ ಸಂಖ್ಯೆ:34313/2017ರಲ್ಲಿ ಬೆಂಗಳೂರಿನಲ್ಲಿರುವ ಕರ್ನಾಟಕ ಉಚ್ಚ ನ್ಯಾಯಾಲಯದಿಂದ ಹೊರಡಿಸಲಾದ ಅಂತಿಮ ತೀರ್ಪು ಮತ್ತು ಆದೇಶದ ವಿರುದ್ಧ ಈ ಅಪೀಲನ್ನು ಸಲ್ಲಿಸಲಾಗಿದ್ದು, ಇದರಲ್ಲಿ ಅಪೀಲುದಾರನು ಸಲ್ಲಿಸಿದ ರಿಟ್ ಅರ್ಜಿಯನ್ನು ಉಚ್ಚ ನ್ಯಾಯಾಲಯವು ವಜಾಗೊಳಿಸಿದೆ.

3. ಈ ಅಪೀಲಿನಲ್ಲಿ ಒಳಗೊಂಡಿರುವ ಸಣ್ಣ ವಿವಾದವನ್ನು ನಿರ್ಣಯಿಸುವ ದೃಷ್ಟಿಯಿಂದ, ಕೆಲವು ಸುಸಂಬದ್ಧ ಸಂಗತಿಗಳನ್ನು ನಿರೂಪಿಸಬೇಕಾದ ಅವಶ್ಯಕತೆಯಿದೆ.

4. ಅಪೀಲುದಾರ – ಮೈಸೂರು ಅಭಿವೃದ್ಧಿ ಪ್ರಾಧಿಕಾರವು (ಸಂಕ್ಷಿಪ್ತವಾಗಿ, "ಪ್ರಾಧಿಕಾರವು") ಪ್ರತಿವಾದಿಯಾಗಿದ್ದರೆ, ಪ್ರತ್ಯಪೀಲುದಾರರು ಈ ದಾವೆಯಲ್ಲಿ ವಾದಿಯಾಗಿದ್ದು, ಇವರಿಂದಲೇ ಈ ಅಪೀಲು ಉದ್ಭವಿಸಿರುತ್ತದೆ.

5. ಮೈಸೂರಿನ ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಲಘು ವಿವಾದಗಳ ನ್ಯಾಯಾಲಯದಲ್ಲಿ ಅಪೀಲುದಾರ – ಪ್ರಾಧಿಕಾರದ ವಿರುದ್ಧ ಸಿವಿಲ್ ದಾವೆಯನ್ನು (ಓ.ಎಸ್. ಸಂ.685/2006) ಪ್ರತ್ಯಪೀಲುದಾರನು ಹೂಡಿರುತ್ತಾನೆ. ಈ ದಾವೆಯು ಮೈಸೂರಿನ ದೇವರಾಜ ಮೊಹಲ್ಲಾ, 2ನೇ ಹಂತ, ವಿಜಯನಗರದಲ್ಲಿರುವ ಸಂ.2442ನ್ನು ಹೊಂದಿರುವ ಜಮೀನಿಗೆ ಸಂಬಂಧಪಟ್ಟಿದ್ದಾಗಿದ್ದು, ಇದನ್ನು ಸ್ವಾಮ್ಯದ ಘೋಷಣೆ ಮತ್ತು ಶಾಶ್ವತ ನಿರ್ಬಂಧಕಾಜ್ಞೆಗಾಗಿ ಹೂಡಲಾಗಿದೆ. (ಇನ್ನು ಮುಂದೆ 'ದಾವೆಯ ಜಮೀನು' ಎಂದು ಕರೆಯಲಾಗಿದೆ).

6. ನೋಟೀಸನ್ನು ಜಾರಿ ಮಾಡಿದ ಮೇಲೆ ಅಪೀಲುದಾರ–ಪ್ರಾಧಿಕಾರವು ಲಿಖಿತ ಹೇಳಿಕೆಯನ್ನು ಸಲ್ಲಿಸಿದೆ. ಪಕ್ಷಕಾರರು ತಮ್ಮ ಸಾಕ್ಷ್ಯವನ್ನು ಒದಗಿಸಿದ್ದಾರೆ. ದಿನಾಂಕ 20.3.2012ರ ತೀರ್ಪು/ಡಿಕ್ರಿ ಮೂಲಕ, ಅಧಿವಿಚಾರಣಾ ನ್ಯಾಯಾಲಯವು ಈ ಪ್ರತ್ಯಪೀಲುದಾರನ ದಾವೆಯನ್ನು ಡಿಕ್ರಿಗೊಳಿಸಿದೆ ಮತ್ತು ದಾವೆಯ ಜಮೀನಿಗೆ ಸಂಬಂಧಿಸಿದಂತೆ ಅಪೀಲುದಾರ–ಪ್ರಾಧಿಕಾರದ ವಿರುದ್ಧ ಡಿಕ್ರಿ ಹೊರಡಿಸಿದೆ.

7. ಅಪೀಲುದಾರ – ಪ್ರಾಧಿಕಾರವು ಇದರಿಂದ ಬಾಧಿತಗೊಂಡು ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ (ಇನ್ನು ಮುಂದೆ "ಸಂಹಿತೆ" ಎಂದು ಕರೆಯಲಾಗಿದೆ). 96ನೇ ಪ್ರಕರಣದಡಿ ಮೊದಲ ಅಪೀಲನ್ನು (ಆರ್.ಎ. ಸಂ.370/2012) ಮೈಸೂರಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಲ್ಲಿಸಿತು. ಈ ಅಪೀಲನ್ನು 25.04.2014ರಂದು ಸುನಾವಣೆಗಾಗಿ ಪಟ್ಟಿ ಮಾಡಲಾಯಿತು. ಆ ದಿನದಂದು, ಅಪೀಲನ್ನು ಸುನಾವಣೆಗಾಗಿ ಕರೆದಾಗ ಅಪೀಲುದಾರರ ವಕೀಲರು ಹಾಜರಾಗಲಿಲ್ಲ. ಆದುದರಿಂದ, ಅಪೀಲು ನ್ಯಾಯಾಲಯವು ಗೈರು ಹಾಜರಿಗಾಗಿ ಅಪೀಲನ್ನು ವಜಾಗೊಳಿಸಿತು.

8. ಆದುದರಿಂದ, ಅಪೀಲು–ಪ್ರಾಧಿಕಾರವು ದಿನಾಂಕ: 25.04.2014ರ ಆದೇಶವನ್ನು ಪುನಃ ಕರೆಯಲು ಕೋರಿ ಅಪೀಲು ನ್ಯಾಯಾಲಯದ ಮುಂದೆ ಅರ್ಜಿಯನ್ನು ಸಲ್ಲಿಸಿತು ಮತ್ತು ಗುಣಾರ್ಹತೆಗಳ ಆಧಾರದ ಮೇಲೆ ಅಪೀಲಿನ ಸುನಾವಣೆಗಾಗಿ ಅವರ ಅಪೀಲನ್ನು ಪೂರ್ವಸ್ಥಿತಿಗೆ ತರಲು ಕೋರಲಾಯಿತು. ದಿನಾಂಕ: 29.06.2016ರ ಆದೇಶದ ಮೂಲಕ, ಅಪೀಲು ನ್ಯಾಯಾಲಯವು ಅರ್ಜಿಯನ್ನು ವಜಾಗೊಳಿಸಿದ್ದರಿಂದಾಗಿ, ಅದು ಬೆಂಗಳೂರಿನಲ್ಲಿರುವ ಕರ್ನಾಟಕ ಉಚ್ಚ ನ್ಯಾಯಾಲಯದ ಮುಂದೆ, ಭಾರತದ ಸಂವಿಧಾನದ 227ನೇ ಅನುಚ್ಛೇದದಡಿ ಅಪೀಲುದಾರ–ಪ್ರಾಧಿಕಾರವು ರಿಟ್ ಅರ್ಜಿಯನ್ನು ಸಲ್ಲಿಸುವುದಕ್ಕೆ ಕಾರಣವಾಯಿತು. ಪ್ರಶ್ನಿತ ಆದೇಶದ ಮೂಲಕ ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ವಜಾ ಮಾಡಿತು ಮತ್ತು ಅಪೀಲು ನ್ಯಾಯಾಲಯದ ಆದೇಶವನ್ನು ದೃಢೀಕರಿಸಿತು. ಇದರಿಂದಾಗಿ, ಈ ನ್ಯಾಯಾಲಯದಲ್ಲಿ ಪ್ರತಿವಾದಿಯಾಗಿದ್ದ ಅಪೀಲುದಾರ–ಪ್ರಾಧಿಕಾರವು ವಿಶೇಷ ಅನುಮತಿಯ ಮುಖಾಂತರ ಈ ಅಪೀಲನ್ನು ಸಲ್ಲಿಸುವುದಕ್ಕೆ ಕಾರಣವಾಯಿತು.

9. ಹೀಗಾಗಿ, ಈ ಅಪೀಲಿನಲ್ಲಿ ಪರಿಶೀಲನೆಗಾಗಿ ಉದ್ಭವಿಸಿದ ಕಿರು ಪ್ರಶ್ನೆಯೆಂದರೆ, ಅಪೀಲುದಾರ–ಪ್ರಾಧಿಕಾರವು (ಪ್ರತಿವಾದಿ) ಸಲ್ಲಿಸಿದ ಅರ್ಜಿಯನ್ನು (ಎಂ.ಎ. ಸಂಖ್ಯೆ:77/2014) ವಜಾಗೊಳಿಸುವಲ್ಲಿ ಅಪೀಲು ನ್ಯಾಯಾಲಯ ಮತ್ತು ಉಚ್ಚ ನ್ಯಾಯಾಲಯವು ಸಮರ್ಥಿತವಾಗಿವೆಯೇ? ಹಾಗೂ ಅವು ಈ ಕಾರಣದಿಂದ, ಅವರ ಮೊದಲ ಅಪೀಲನ್ನು ಪೂರ್ವಸ್ಥಿತಿಗೆ ತರಲು ನಿರಾಕರಿಸುವಲ್ಲಿ ಸಮರ್ಥಿತವಾಗಿವೆಯೇ? ಎಂಬುದಾಗಿದೆ.

10. ಅಪೀಲುದಾರ–ಪ್ರಾಧಿಕಾರದ ಪರ ಮಾನ್ಯ ವಕೀಲರಾದ ಶ್ರೀ ಮಹೇಶ್ ಠಾಕೂರ್‌ರವರ ಮತ್ತು ಪ್ರತ್ಯಪೀಲುದಾರರ ಪರ ಮಾನ್ಯ ವಕೀಲರಾದ ಶ್ರೀ ಆನಂದ್ ಸಂಜಯ್ ಎಂ. ನುಲಿರವರ ವಾದಗಳನ್ನು ಆಲಿಸಲಾಗಿದೆ.

11. ಪಕ್ಷಕಾರರ ಪರ ಮಾನ್ಯ ವಕೀಲರ ವಾದಗಳನ್ನು ಆಲಿಸಲಾಗಿದ್ದು, ಪ್ರಕರಣದ ದಾಖಲೆಯನ್ನು ಅವಗಾಹಿಸಿದ ಮೇಲೆ ನಾವು ಅಪೀಲನ್ನು ಪುರಸ್ಕರಿಸಲು, ಪ್ರಶ್ನಿತ ಆದೇಶವನ್ನು ಮತ್ತು ಎಂ.ಎ. ಸಂಖ್ಯ:77/2014ರಲ್ಲಿ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಹೊರಡಿಸಿದ ದಿನಾಂಕ: 29.06.2016ರ ಆದೇಶವನ್ನು ಸಹ ರದ್ದುಪಡಿಸಲು ಒಲವು ತೋರಿದೆವು ಮತ್ತು ತತ್ಪರಿಣಾಮವಾಗಿ, ಅಪೀಲುದಾರ–ಪ್ರಾಧಿಕಾರವು (ಪ್ರತಿವಾದಿ) ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಹಾಗೂ ಅಪೀಲು ನ್ಯಾಯಾಲಯವು ಹೊರಡಿಸಿದ ದಿನಾಂಕ: 25.04.2014ರ ಆದೇಶವನ್ನು ಹಿಂಪಡೆಯಲು ಒಲವು ತೋರಿದೆವು.

12. ಮೊದಲಲ್ಲಿ, ಅಪೀಲು ಪ್ರಾಧಿಕಾರದ ಪರ ಮಾನ್ಯ ವಕೀಲರಿಂದ ಸರಿಯಾಗಿಯೇ ನಮ್ಮ ಗಮನಕ್ಕೆ ಬಂದ ಒಂದು ಕಾನೂನು ಸ್ಥಿತಿಯನ್ನು ಸ್ಪಷ್ಟೀಕರಿಸುವುದು ಸಮಂಜಸವೆಂದು ನಾವು ಪರಿಗಣಿಸುತ್ತೇವೆ.

13. ದಿನಾಂಕ: 25.04.2014ರಂದು ಅಪೀಲನ್ನು ಸುನಾವಣೆಗಾಗಿ ಕರೆದಾಗ, ಅಪೀಲುದಾರ–ಪ್ರಾಧಿಕಾರದ ಪರವಾಗಿ ಯಾರೂ ಹಾಜರಾಗಿರಲಿಲ್ಲವಾದ ಕಾರಣ ಅಪೀಲುದಾರ–ಪ್ರಾಧಿಕಾರದಿಂದ ಸಲ್ಲಿಸಲಾದ ಮೊದಲ ಅಪೀಲು (ಆರ್.ಎ.ಸಂಖ್ಯೆ:370/2012) ದಿನಾಂಕ: 25.04.2014ರಂದು ವಜಾವಣೆಗೊಂಡಿದೆ.

14. ಅಂಥ ವಜಾವಣೆಗೆ ಸಂಹಿತೆಯ ಕ್ರಮಾದೇಶ 41ರ ನಿಯಮ 19ರ ಉಪಬಂಧಗಳು ಅನ್ವಯವಾಗುತ್ತವೆ ಮತ್ತು ಈ ಕಾರಣದಿಂದ ಕ್ರಮಾದೇಶ 41ರ ನಿಯಮ 19ರ ಉಪಬಂಧಗಳನ್ನು ಅವಲಂಬಿಸುವ ಮೂಲಕ ಮಾತ್ರ ಹಾಗೂ 25.04.2014ರಂದು ಅಪೀಲನ್ನು ಸುನಾವಣೆಗಾಗಿ ಕರೆದಾಗ ಹಾಜರಾಗುವುದರಿಂದ ಅವರನ್ನು ತಡೆದ ಸೂಕ್ತ ಕಾರಣವನ್ನು ನೀಡುವುದಕ್ಕೆ ಒಳಪಟ್ಟಂತೆ, ಅಪೀಲುದಾರ–ಪ್ರಾಧಿಕಾರದ ಸಂದರ್ಭದಲ್ಲಿ ಅಪೀಲನ್ನು ಸುನಾವಣೆಗಾಗಿ ಮರು–ಅಂಗೀಕರಿಸಬಹುದಾಗಿದೆ.

15. ಸಂಹಿತೆಯ ಕ್ರಮಾದೇಶ 41ರ ನಿಯಮ 19ರಡಿ ಅಪೀಲು ನ್ಯಾಯಾಲಯವು ಹೊರಡಿಸಿದ, ಅಪೀಲನ್ನು ಮರು–ಅಂಗೀಕರಿಸಲು ನಿರಾಕರಿಸಿದ ಆದೇಶವನ್ನು, ಸಂಹಿತೆಯ ಕ್ರಮಾದೇಶ 43ರ ನಿಯಮ 1(ಟಿ)ಯಡಿ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಲು ಅವಕಾಶವಿದೆಯೆಂಬುದನ್ನು ಅಭಿವ್ಯಕ್ತಿಸುತ್ತದೆ. ಈ ಪ್ರಕರಣದಲ್ಲಿ ಅಪೀಲು ನ್ಯಾಯಾಲಯವು ಅಪೀಲನ್ನು ಮರು–ಅಂಗೀಕರಿಸಲು ನಿರಾಕರಿಸಿರುವುದರಿಂದ ಮತ್ತು ಅಪೀಲುದಾರ–ಪ್ರಾಧಿಕಾರದಿಂದ ಸಲ್ಲಿಸಲಾದ ಅರ್ಜಿಯನ್ನು ವಜಾಗೊಳಿಸಿರುವುದರಿಂದ, ಅಪೀಲುದಾರ–ಪ್ರಾಧಿಕಾರದ ಪರಿಹಾರವು, ಸಂಹಿತೆಯ ಕ್ರಮಾದೇಶ 43ರ ನಿಯಮ 1(ಟಿ)ಯಡಿ ದಿನಾಂಕ: 29.6.2016ರ ಆದೇಶದ ವಿರುದ್ಧ ಉಚ್ಚ ನ್ಯಾಯಾಲಯದಲ್ಲಿ ಅಪೀಲು ಸಲ್ಲಿಸುವುದಾಗಿರುತ್ತದೆ.

16. ಅಪೀಲುದಾರ–ಪ್ರಾಧಿಕಾರವು ಸಂಹಿತೆಯ ಕ್ರಮಾದೇಶ 43ರ ನಿಯಮ 1(ಟಿ)ಯಡಿ ಅಪೀಲು ಸಲ್ಲಿಸುವುದಕ್ಕೆ ಬದಲಾಗಿ, ದಿನಾಂಕ: 29.06.2016ರ ಆದೇಶದ ವಿರುದ್ಧ ಸಂವಿಧಾನದ ಅನುಚ್ಛೇದ 227ರಡಿ ರಿಟ್ ಅರ್ಜಿಯನ್ನು ಸಲ್ಲಿಸಿದೆ. ಅಪೀಲು ಪ್ರಾಧಿಕಾರದ ಕಡೆಯಿಂದಾದ ತಪ್ಪು ಇದಾಗಿದೆ ಮತ್ತು ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ಪುರಸ್ಕರಿಸಲು ನಿರಾಕರಿಸಬೇಕಿತ್ತು ಹಾಗೂ ಅದಕ್ಕೆ ಬದಲಾಗಿ, ರಿಟ್ ಅರ್ಜಿಯನ್ನು ಸಂಹಿತೆಯ ಕ್ರಮಾದೇಶ 43ರ ನಿಯಮ 1(ಟಿ)ಯಡಿ ಅಪೀಲನ್ನಾಗಿ ಪರಿವರ್ತಿಸುವುದಕ್ಕಾಗಲೀ ಅಥವಾ ಸಂದರ್ಭಾನುಸಾರ ತನ್ನ ವಿವೇಚನೆಯಿಂದ, ಸಂಹಿತೆಯ ಕ್ರಮಾದೇಶ 43ರ ನಿಯಮ 1(ಟಿ)ಯಡಿ ಅಪೀಲು ಸಲ್ಲಿಸುವ ಸ್ವಾತಂತ್ರ್ಯದೊಂದಿಗೆ ರಿಟ್ ಅರ್ಜಿಯನ್ನು ಹಿಂಪಡೆಯುವುದಕ್ಕಾಗಲೀ ಅಪೀಲುದಾರ – ಪ್ರಾಧಿಕಾರಕ್ಕೆ ಅನುಮತಿ ನೀಡಬೇಕಿತ್ತು. ಹಾಗಿದ್ದರೂ, ಇದನ್ನು ಗಮನಿಸಲಾಗಿರುವುದಿಲ್ಲ ಹಾಗೂ ಉಚ್ಚ ನ್ಯಾಯಾಲಯವು ಗುಣಾರ್ಹತೆಗಳ ಆಧಾರದ ಮೇಲೆ ರಿಟ್ ಅರ್ಜಿಯನ್ನು ವಜಾಗೊಳಿಸಿದೆ.

17. ಆದುದರಿಂದ, ನಾವು, ಸಂಹಿತೆಯ ಕ್ರಮಾದೇಶ 41ರ ನಿಯಮ 19ರಡಿ ಸಲ್ಲಿಸಲಾದ ಅರ್ಜಿಯನ್ನು ವಜಾಗೊಳಿಸಿದ ಅಪೀಲು ನ್ಯಾಯಾಲಯದಿಂದ ಹೊರಡಿಸಲಾದ ದಿನಾಂಕ 29.06.2016ರ

ಆದೇಶದ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಸಂಹಿತೆಯ ಕ್ರಮಾದೇಶ 43ರ ನಿಯಮ 1(ಟಿ)ಯಡಿ ಅಪೀಲು ಸಲ್ಲಿಸಬಹುದೆಂಬ ಕಾನೂನು ಸ್ಥಿತಿಯನ್ನು ಸ್ಪಷ್ಟೀಕರಿಸುತ್ತೇವೆ.

18. ಅದೇನೇ ಆಗಿರಲಿ, ನಮ್ಮ ಪರಿಗಣಿತ ಅಭಿಪ್ರಾಯದಲ್ಲಿ, ರಿಟ್ ಅರ್ಜಿಯನ್ನು ವಜಾ ಮಾಡುವಲ್ಲಿ ಉಚ್ಚ ನ್ಯಾಯಾಲಯವು ತಪ್ಪೆಸಗಿದೆ. ಉಚ್ಚ ನ್ಯಾಯಾಲಯವು ರಿಟ್ ಅರ್ಜಿಯನ್ನು ಪುರಸ್ಕರಿಸಬೇಕಾಗಿತ್ತು ಮತ್ತು ಅಪೀಲುದಾರ – ಪ್ರಾಧಿಕಾರಕ್ಕೆ ಅವರ ಅಪೀಲಿನ ಗುಣಾರ್ಹತೆಗಳ ಆಧಾರದ ಮೇಲೆ ಸುನಾವಣೆಗೆ ಅವಕಾಶ ನೀಡಬೇಕಾಗಿತ್ತು.

19. ವಾಸ್ತವವಾಗಿ, ಈ ನ್ಯಾಯಾಲಯದ ಪ್ರಮುಖ ಪ್ರಕರಣಗಳಲ್ಲಿ ಒಂದಾಗಿದ್ದ **ಸಂಗ್ರಾಮ್‌ಸಿಂಗ್ –ವಿರುದ್ಧ– ಎಲೆಕ್ಷನ್ ಟ್ರಿಬ್ಯೂನಲ್, ಕೊತಾಹ್, ಎಐಆರ್ 1955 ಎಸ್‌ಸಿ 425ರ** ಪ್ರಕರಣದಲ್ಲಿ ಮಾನ್ಯ ನ್ಯಾಯಾಧೀಶರಾದ ನ್ಯಾಯಮೂರ್ತಿ ವಿವಿಯನ್ ಬೋಸ್ ರವರು ನೀಡಿದ ಅಭಿಪ್ರಾಯೋಕ್ತಿಗಳನ್ನು ಈ ಪ್ರಕರಣವು ನಮಗೆ ನೆನಪಿಸಿದೆ.

20. ನ್ಯಾಯಮೂರ್ತಿ ಶ್ರೀ ವಿವಿಯನ್ ಬೋಸ್‌ರವರು ನ್ಯಾಯಪೀಠದ ಪರವಾಗಿ ಮಾತನಾಡುತ್ತಾ, ತಮ್ಮ ವಿಶಿಷ್ಟ ಶೈಲಿಯ ಬರವಣಿಗೆಯ ಮೂಲಕ, ಕ್ರಮಾದೇಶ 9 ರಿಂದ ಉದ್ಭವಿಸುವ ಪ್ರಕರಣದೊಂದಿಗೆ ವ್ಯವಹರಿಸುವಾಗ ಈ ಮುಂದಿನ ಅಭಿಪ್ರಾಯೋಕ್ತಿಗಳನ್ನು ನೀಡಿದ್ದಾರೆ ಹಾಗೂ ನ್ಯಾಯಾಲಯಗಳಿಗೆ ಅವು ಪ್ರಕರಣವನ್ನು ನಿರ್ಣಯಿಸುವಾಗ ಅವುಗಳ ಕರ್ತವ್ಯವನ್ನು ನೆನಪು ಮಾಡಿಕೊಟ್ಟಿದ್ದಾರೆ. ಈ ಅಭಿಪ್ರಾಯೋಕ್ತಿಗಳು ಸಮರ್ಪಕವಾಗಿದ್ದು, ಅವುಗಳನ್ನು ಈ ಕೆಳಗಿನಂತೆ ಓದಲಾಗಿದೆ:

> *"ಒಂದು ಪ್ರಕ್ರಿಯಾ ಸಂಹಿತೆಯನ್ನು ಅದು ಹೇಗಿದೆಯೋ ಹಾಗೆಯೇ ಗಮನಿಸಬೇಕು. ಇದೊಂದು ನ್ಯಾಯವನ್ನು ಸುಗಮಗೊಳಿಸಲು ಮತ್ತು ನ್ಯಾಯೋದ್ದೇಶಗಳನ್ನು ಈಡೇರಿಸುವುದಕ್ಕೆ ನೆರವಾಗಲು ವಿನ್ಯಾಸಗೊಳಿಸಿರುವಂಥದ್ದಾಗಿದೆ.*

*ಇದು ಶಿಕ್ಷೆ ಮತ್ತು ದಂಡಗಳಿಗಾಗಿ ಇರುವ ದಂಡನೆಯ ಅಧಿನಿಯಮಿತಿಯಲ್ಲ; ಇದು ಜನರಿಂದ ತಪ್ಪು ಮಾಡಿಸಲು ವಿನ್ಯಾಸಗೊಂಡಿರುವುದಲ್ಲ, ಆದುದರಿಂದ ಅರ್ಥ ವಿವರಣೆಯ ಯುಕ್ತ ಹೊಂದಾಣಿಕೆಗೆ ಅವಕಾಶವನ್ನೇ ಕೊಡದಂಥ ಕಲಮುಗಳ ತೀರಾ ತಾಂತ್ರಿಕ ಸಂರಚನೆ ಇದಾಗಿದ್ದು, ನ್ಯಾಯವನ್ನು ಸುಗಮಗೊಳಿಸಲು ರೂಪಿಸಲಾದ ಈ ಮಾಧ್ಯಮವನ್ನು ಆ ಉದ್ದೇಶಕ್ಕೆ ತಡೆಯೊಡ್ಡಲು ಬಳಸುವಂತಾಗದಿರಲು ಇದನ್ನು (ಆದರೆ, ಯಾವಾಗಲೂ ಎರಡೂ ಕಡೆಯವರಿಗೆ ನ್ಯಾಯವನ್ನು ಮಾಡುವಂತೆ) ಸಂರಕ್ಷಿಸತಕ್ಕದ್ದು. ನಮ್ಮ ಕಾನೂನು ಪ್ರಕ್ರಿಯೆಗಳು ಸ್ವಾಭಾವಿಕ ನ್ಯಾಯದ ತತ್ವದ ಮೇಲೆ ನಿಂತಿದ್ದು ಅದು ವ್ಯಕ್ತಿಗಳ ಅಹವಾಲನ್ನು ಕೇಳದೆ ದಂಡನೆಗೆ ಗುರಿಪಡಿಸಬಾರದು, ನಿರ್ಣಯಗಳನ್ನು ಅವರ ಬೆನ್ನ ಹಿಂದೆ, ಅವರಿಗೆ ತಿಳಿಯದಂತೆ ಕೈಗೊಳ್ಳಬಾರದು; ಅವರ ಜೀವ/ಜೀವನ ಮತ್ತು ಸ್ವತ್ತಿಗೆ ಹಾನಿಯಾಗುವ ವ್ಯವಹರಣೆಗಳನ್ನು ಅವರ ಅನುಪಸ್ಥಿತಿಯಲ್ಲಿ ಮುಂದುವರೆಸಬಾರದು ಮತ್ತು ಅವರು ಅವುಗಳಲ್ಲಿ ಭಾಗಿಯಾಗುವುದಕ್ಕೆ ಅಡ್ಡಿಪಡಿಸಬಾರದು ಎಂಬುದಾಗಿ ಅಗತ್ಯಪಡಿಸುತ್ತದೆ. ಸಹಜವಾಗಿಯೇ, ಇದರಲ್ಲಿ ಅಪವಾದಗಳಿರಲೇಬೇಕು ಮತ್ತು ಅವುಗಳನ್ನು ಸ್ಪಷ್ಟವಾಗಿ ವ್ಯಾಖ್ಯಾನಿಸಿದ್ದಲ್ಲಿ ಅವುಗಳನ್ನು ಕಾರ್ಯರೂಪಕ್ಕೆ ತರಬೇಕು. ಆದರೆ ಒಟ್ಟಾರೆಯಾಗಿ ಮತ್ತು ಆ ಪರಂತುಕಕ್ಕೆ ಒಳಪಟ್ಟಂತೆ ತೆಗೆದುಕೊಂಡಾಗ ಆ ತತ್ವದ ಬೆಳಕಿನಲ್ಲಿ ಅದು ಯುಕ್ತವಾಗಿ ಸಾಧ್ಯವಾಗುವ ಕಡೆಗಳಲ್ಲಿ ನಮ್ಮ ಕಾನೂನು ಪ್ರಕ್ರಿಯೆಯನ್ನು ಅರ್ಥೈಸಬೇಕಾಗುತ್ತದೆ."*

21. ಮೇಲೆ ಹೇಳಲಾದ ಕಾನೂನಿನ ವಿವರಣೆಯನ್ನು ಪರಿಗಣಿಸಿ ಮತ್ತು ಈ ಪ್ರಕರಣದ ಸಂಗತಿಗಳಿಗೆ ಅದನ್ನು ಅನ್ವಯಿಸಿ, ಈ ಅಪೀಲನ್ನು ಪುರಸ್ಕರಿಸುವಲ್ಲಿ ಹಾಗೂ ಪ್ರಶ್ನಿತ ಆದೇಶವನ್ನು ಬದಿಗಿರಿಸುವಲ್ಲಿ ನಮಗೆ ಯಾವುದೇ ಹಿಂಜರಿಕೆಯಿಲ್ಲ.

22. ನಮ್ಮ ಅಭಿಪ್ರಾಯದಲ್ಲಿ, ಮೊದಲ ಅಪೀಲು ಎಂಬುದು ಅಪೀಲುದಾರರ ಅಮೂಲ್ಯ ಹಕ್ಕು ಎಂಬುದನ್ನು ಅಧೀನ ನ್ಯಾಯಾಲಯಗಳು ಗಮನಿಸಬೇಕಾಗುತ್ತದೆ ಮತ್ತು ಈ ಕಾರಣದಿಂದ, ಅಪೀಲುದಾರ–ಪ್ರಾಧಿಕಾರವು ತಮ್ಮ ಅಪೀಲನ್ನು ಗುಣಾರ್ಹತೆಗಳ ಆಧಾರದ ಮೇಲೆ ಮುಂದುವರೆಸುವ ಅವಕಾಶಕ್ಕೆ ಹಕ್ಕುಳ್ಳದ್ದಾಗಿದೆ. ಅಪೀಲುದಾರರ ವಕೀಲರು ಹಾಜರಾಗದಿದ್ದಲ್ಲಿ ಅದಕ್ಕೆ ಬೇಕಾದಷ್ಟು ಕಾರಣಗಳಿರಬಹುದಾದರೂ, ನ್ಯಾಯಾಲಯವು ಅಪೀಲಿನ ಗುಣಾವಗುಣಗಳ ಆಧಾರದ ಮೇಲೆ ಮುಂದುವರೆಸಲು ಅವರ ಅಮೂಲ್ಯ ಹಕ್ಕಿನಿಂದ ಅವರನ್ನು ವಂಚಿತಗೊಳಿಸುವ ಬದಲಾಗಿ, ಪ್ರತ್ಯಪೀಲುದಾರರಿಗೆ (ವಾದಿ) ಪರಿಹಾರ ಕೊಡಲು ಅವರ ಅಪೀಲನ್ನು ಪೂರ್ವಸ್ಥಿತಿಗೆ ತರುವುದಕ್ಕೆ ಅವರಿಗೆ ಸ್ವಲ್ಪ ವೆಚ್ಚವನ್ನು ವಿಧಿಸಿರಬಹುದಾಗಿತ್ತು. ನ್ಯಾಯಮೂರ್ತಿ ಶ್ರೀ ವಿವಿಯನ್ ಬೋಸ್‌ರವರು ದಾವೆಯ ಎರಡೂ ಕಡೆಯ ಪಕ್ಷಕಾರರಿಗೆ ಗಣನೀಯ ನ್ಯಾಯವನ್ನು ನೀಡಲು **ಸಂಗ್ರಾಮ್‌ಸಿಂಗ್** (ಮೇಲೆ ಹೇಳಿದ) ಪ್ರಕರಣದಲ್ಲಿ ಈ ಸ್ವರೂಪದ ಪ್ರಕರಣಗಳನ್ನು ನಿರ್ವಹಿಸುವಾಗ ನ್ಯಾಯಾಲಯಗಳಿಗೆ ನೆನಪು ಮಾಡಿರುವುದು ಇದನ್ನೇ ಆಗಿದೆ. ವಾಸ್ತವವಾಗಿ, ನ್ಯಾಯಾಲಯಕ್ಕೆ ಹಾಜರಾಗದೆ ಅಪೀಲು ವಜಾಗೊಳ್ಳುವುದಕ್ಕೂ ಮತ್ತು ಅಪೀಲಿನ ಗುಣಾರ್ಹತೆಗಳ ಮೇಲೆ ಅಪೀಲನ್ನು ವಜಾ ಮಾಡುವುದಕ್ಕೂ ವ್ಯತ್ಯಾಸವಿದೆ. ಮೊದಲಿನ ವಜಾ ಆಗಿರುವುದು ವ್ಯಾಜ್ಯಕಾರರ ಬೆನ್ನ ಹಿಂದೆ ಅವರಿಗೆ ತಿಳಿಯದಂತೆ ಮತ್ತು ಆ ನಂತರದ ವಜಾ ಆಗಿರುವುದು ವ್ಯಾಜ್ಯಕಾರನ ವಾದವನ್ನು ಆಲಿಸಿದ ತರುವಾಯ. ಹಿಂದಿನದಕ್ಕಿಂತಲೂ ತರುವಾಯದ್ದಕ್ಕೆ ಯಾವಾಗಲೂ ಆದ್ಯತೆಯಿರುತ್ತದೆ.

23. ಆದೇಶವನ್ನು ವಾಪಸ್ಸು ತರಿಸಿಕೊಳ್ಳಲು ಅಪೀಲುದಾರ–ಪ್ರಾಧಿಕಾರವು ಸಲ್ಲಿಸಿದ ಅರ್ಜಿಯನ್ನು ನಾವು ಪರಿಶೀಲಿಸಿದ್ದೇವೆ ಮತ್ತು ಅದು ಸಂಹಿತೆಯ 41ನೇ ಕ್ರಮಾದೇಶದ 19ನೇ ನಿಯಮದ ಅರ್ಥ ವ್ಯಾಪ್ತಿಯೊಳಗೆ ಸಾಕಷ್ಟು ಕಾರಣವನ್ನು ಒಳಗೊಂಡಿದೆಯೆಂದು ನಮಗೆ ಕಂಡುಬಂದಿದೆ. ಆದುದರಿಂದ, ಅರ್ಜಿಯು ಪುರಸ್ಕರಿಸುವುದಕ್ಕೆ ಅರ್ಹವಾಗಿದೆ. ಹಾಗಿದ್ದರೂ, ಅದು

ಅಪೀಲುದಾರ–ಪ್ರಾಧಿಕಾರದಿಂದ ಪ್ರತ್ಯಪೀಲುದಾರನಿಗೆ (ವಾದಿ) ಸಂದಾಯವಾಗಬೇಕಾದ ರೂ.10,000/– ವೆಚ್ಚ ಪಾವತಿಗೆ ಒಳಪಟ್ಟಿದೆ. ಅಪೀಲಿನ ಸುನಾವಣೆಗೆ ಮುಂಚೆ ವೆಚ್ಚ ಪಾವತಿಯಾಗಲಿ.

24. ಈ ಮೇಲಿನ ಚರ್ಚೆಯ ದೃಷ್ಟಿಯಲ್ಲಿ, ಈ ಅಪೀಲು ಯಶಸ್ವಿಯಾಗಿದ್ದು, ತದನುಸಾರವಾಗಿ ಅದನ್ನು ಪುರಸ್ಕರಿಸಲಾಗಿದೆ. ಪ್ರಶ್ನಿತ ಆದೇಶವನ್ನು ರದ್ದುಗೊಳಿಸಲಾಗಿದೆ. ತತ್ಪರಿಣಾಮವಾಗಿ, ಅಪೀಲುದಾರರು (ಎಂ.ಎ.ಸಂಖ್ಯೆ:77/2014) ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲಾಗಿದೆ. ತದನುಸಾರವಾಗಿ ಆರ್.ಎ.370/2012ನ್ನು ಕಾನೂನಿಗೆ ಅನುಸಾರವಾಗಿ ಗುಣಾರ್ಹತೆಗಳ ಮೇಲೆ ಅದರ ಸುನಾವಣೆಗಾಗಿ, ಅದರ ಮೂಲ ಸಂಖ್ಯೆಗೆ, ಪೂರ್ವಸ್ಥಿತಿಗೆ ತರಲಾಗಿದೆ.

25. ಅಪೀಲಿನಲ್ಲಿ ಒಳಗೊಂಡ ವಿವಾದದ ಗುಣಾರ್ಹತೆಗಳಿಗೆ ನಮ್ಮ ವಿವೇಚನೆಯನ್ನು ನಾವು ಅನ್ವಯಿಸಿರದ ಕಾರಣದಿಂದ ಗುಣಾರ್ಹತೆಗಳ ಮೇಲೆ ನಮ್ಮ ಯಾವುದೇ ಅಭಿಪ್ರಾಯೋಕ್ತಿಗಳಿಂದ ಪ್ರಭಾವಿತವಾಗಿರದ ಅಪೀಲಿನ ಸುನಾವಣೆಗಾಗಿ ದಿನಾಂಕವನ್ನು ನಿಗದಿಪಡಿಸಲು ಅಪೀಲು ನ್ಯಾಯಾಲಯಕ್ಕೆ ಸಾಧ್ಯಗೊಳಿಸಲು ದಿನಾಂಕ: 05.03.2019ರಂದು ಸಂಬಂಧಪಟ್ಟ ಅಪೀಲು ನ್ಯಾಯಾಲಯದ ಮುಂದೆ ಹಾಜರಾಗಲು ಪಕ್ಷಕಾರರಿಗೆ ನಿರ್ದೇಶಿಸಲಾಗಿದೆ. ಅಪೀಲಿನ ಸುನಾವಣೆಯಾಗಲಿ ಮತ್ತು ಸಾಧ್ಯವಾದಷ್ಟು ಬೇಗನೆ ಆದ್ಯತಾನುಸಾರ ಈ ಆದೇಶದ ದಿನಾಂಕದಿಂದ ಆರು ತಿಂಗಳೊಳಗಾಗಿ ವಿಲೆಯಾಗಲಿ.

********

**ಕ್ಲೇಮು ನಿರಾಕರಣೆ**

**"**ಪ್ರಾದೇಶಿಕ ಭಾಷೆಗಳಲ್ಲಿ ಭಾಷಾಂತರಿಸಲಾದ ತೀರ್ಪುಗಳನ್ನು ಕಕ್ಷಿದಾರರ ಆಕೆಯ/ಆತನ ಸ್ಥಳೀಯ ಭಾಷೆಯಲ್ಲಿ ಅರ್ಥ ಮಾಡಿಕೊಳ್ಳುವ ಉದ್ದೇಶಕ್ಕಾಗಿ ಮಾತ್ರ ಸೀಮಿತಗೊಳಿಸಲಾಗಿದೆ ಮತ್ತು ಇತರೆ ಯಾವುದೇ ಉದ್ದೇಶಕ್ಕೆ ಅವುಗಳನ್ನು ಬಳಸಿಕೊಳ್ಳುವಂತಿಲ್ಲ. ಎಲ್ಲ ಅಧಿಕೃತ ಹಾಗೂ ಕಚೇರಿ ಉದ್ದೇಶಗಳಿಗಾಗಿ, ಹಾಗೂ ಜಾರಿಗೊಳಿಸುವ ಮತ್ತು ಅನುಷ್ಠಾನಗೊಳಿಸುವುದಕ್ಕಾಗಿ**"** ತೀರ್ಪುಗಳ ಆಂಗ್ಲ ಭಾಷೆಯ ಆವೃತ್ತಿಯು ಅಧಿಕೃತವಾಗಿರತಕ್ಕದ್ದು.**"**